# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ ದಿನಾಂಕ: 06.02.2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 06.02.2021ರಂದು ವಾರ್ಡ್ ಸಂಖ್ಯೆ 129ರ ಫೆಬ್ರವರಿ ಮಾಹೆಯ ವಾರ್ಡ್‌ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹಾಜರಿದ್ದಸದಸ್ಯರು:–

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು.
2. ಭರತ್, ಸಹಾಯಕಅಭಿಯಂತರರು(ವಿದ್ಯುತ್)
3. ಶ್ರೀ.ಕಿರಣ್ ಕುಮಾರ್ ಮಾರ್ಷಲ್, ವಾರ್ಡ್–129.
4. ಶ್ರೀಮತಿ ಮೀನಾ ಎನ್ ಬಿ.ಎಲ್.ಓ, ವಾರ್ಡ್–129.
5. ಶ್ರೀಮತಿ ರಾಜೇಶ್ವರಿ ಎಸ್ ಬಿ.ಎಲ್.ಓ, ವಾರ್ಡ್–129.
6. ಶ್ರೀ ಸುರೇಶ್ ಜಿ. ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು, ವಾರ್ಡ್–129.
7. ಶ್ರೀ ರಾಬಿನ್ ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು, ವಾರ್ಡ್–129.
8. ಶ್ರೀ ಷಟ್ಟಾಳಯ್ಯ ಜಿ ಸೂಪರ್ ವೈಸರ್ ವಾರ್ಡ್–129.
9. ಶ್ರೀ ಸೂರಪ್ಪ ಸೂಪರ್ ವೈಸರ್ ವಾರ್ಡ್–129.
10. ಶ್ರೀ ರಾಮಾಂಜಿನಲು ಸೂಪರ್ ವೈಸರ್ ವಾರ್ಡ್–129.
11. ಶ್ರೀ ರಘು ಸೂಪರ್ ವೈಸರ್ ವಾರ್ಡ್–129.
12. ಶ್ರೀ ಬಾಲು ಸೂಪರ್ ವೈಸರ್ ವಾರ್ಡ್–129.
13. ಶ್ರೀ ಡಿ.ವೈದೇಪೂರ್ ಸದಸ್ಯರು, ಸ್ಥಳೀಯ ವೆಲ್‌ಫೇರ್ ಅಸೋಸಿಯೇಶನ್ 14ನೇ ಬ್ಲಾಕ್, ಅನ್ನಪೂರ್ಣೇಶ್ವರಿನಗರ.
14. ಶ್ರೀ ಎಸ್.ಕೆ. ಭಟ್ ಅಧ್ಯಕ್ಷರು, ಸ್ಥಳೀಯ ವೆಲ್‌ಫೇರ್ ಅಸೋಸಿಯೇಶನ್ 14ನೇ ಬ್ಲಾಕ್, ಅನ್ನಪೂರ್ಣೇಶ್ವರಿನಗರ.
15. ಶ್ರೀ ನವೀನ್ ಸಾರ್ವಜನಿಕರು.
16. ಶ್ರೀ ರಮೇಶ್ ಸಾರ್ವಜನಿಕರು.

ವಾರ್ಡ್ ಸಂಖ್ಯೆ–129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

## ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು

- ಸ್ವಚ್ಛ ಗೃಹ ಕಲಿಕಾ ಕೇಂದ್ರ ಕಾಂಪೋಸ್ಟ್ ತರಬೇತಿ ಕೇಂದ್ರಕ್ಕೆ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ), ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳು ಹಾಗೂ ನಿವಾಸಿಗಳು ಮುಂದಿನ ವಾರದಲ್ಲಿ ದಿನಾಂಕ ನಿಗಧಿಪಡಿಸಿ ಹೆಚ್.ಎಸ್.ಆರ್ ಲೇಔಟ್ ನ ಸ್ವಚ್ಛ ಗೃಹ ಕಲಿಕಾ ಕೇಂದ್ರಕ್ಕೆ ಭೇಟಿ ನೀಡುವಂತೆ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು ಅದರಂತೆ ದಿನಾಂಕ:30.01.2021ರಂದು ಕಿರಿಯ ಆರೋಗ್ಯ ಪರಿವೀಕ್ಷಕರು, ಸ.ಕಾ.ಅ (ಘ.ತ್ಯಾ.ನಿ) ಹಾಗೂ ಸ್ಥಳೀಯ ವೆಲ್‌ಫೇರ್ ಅಸೋಸಿಯೇಶನ್ ಸದಸ್ಯರೊಂದಿಗೆ ಭೇಟಿ ನೀಡಲಾಯಿತು.
- ಹಸಿ ತ್ಯಾಜ್ಯ, ಒಣ ತ್ಯಾಜ್ಯ ವಿಂಗಡಣೆ ಬ್ಲಾಕ್ ಸ್ಪಾಟ್ ಸ್ಟ್ರೀಟ್ ಸ್ವೀಪಿಂಗ್ ವಿಷಯವಾಗಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕೆಂಗುಂಟೆ, ಪಾಪರೆಡ್ಡಿ ಪಾಳ್ಯ, ವಿಧಾನ ಸೌಧ ಬಡಾವಣೆ ನಿವಾಸಿಗಳು ದೂರು ನೀಡಿದರು.
- ಘನತ್ಯಾಜ್ಯ ವಿಭಾಗಕ್ಕೆ ನೀಡಿದ್ದ ದೂರಿನ ವಿಚಾರಿಸಲಾಗಿ ಸದರಿ ವಾರ್ಡ್‌ನಲ್ಲಿ ಹೊಸದಾಗಿ ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ/ವಿಲೇವಾರಿಗೆ ಸಂಬಂಧಿಸಿದಂತೆ ಕಾರ್ಯಾದೇಶ ನೀಡಿದ್ದು, ಶೀಘ್ರವಾಗಿ ದೂರಿಗೆ ಸಂಬಂಧಿಸಿದಂತೆ ಅಗತ್ಯಕ್ರಮ ಕೈಗೊಳ್ಳುವುದಾಗಿ ಸೂಪರ್ ವೈಸರ್ ಗಳು ತಿಳಿಸಿದರು.

  ಕ್ರಮ:- ಕಿರಿಯ ಆರೋಗ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ)

## ❖ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಸಿದ್ವಿನ್ ಬಹುಮಹಡಿ ಕಟ್ಟಡ ನಿರ್ಮಾಣದ ನಂತರ ಸಮರ್ಪಕವಾಗಿ ಮಳೆ ನೀರು ಹರಿಯಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಈ ಸಂಬಂಧ ತೆಗೆದುಕಂಡಿರುವ ಕ್ರಮದ ವಿವರಗಳ ಹಿಂಬರವನ್ನು ಅತೀ ತುರ್ತಾಗಿ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಕೋರಲಾಯಿತು.

  ಕ್ರಮ: ಸಹಾಯಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು.
- 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ನಗರ ಬಡಾವಣೆಯ ನಿವಾಸಿಯಾದ ಶ್ರೀ ರಮೇಶ್ ರವರು, ಚರಂಡಿಯಿಂದ ತೆಗೆದ ಹೂಳು ಮತ್ತು ಡೆಬ್ರಿಸ್ ಅನ್ನು ಅಲ್ಲಿಯೇ ಹಾಕಿದ್ದು ಶೀಘ್ರವಾಗಿ ವಿಲೇವಾರಿಗೊಳಿಸಲು ಕೋರಿದರು.

  ಕ್ರಮ: ಸಹಾಯಕ ಅಭಿಯಂತರರು ವಾರ್ಡ್-129.
- ಪಾಪರೆಡ್ಡಿಪಾಳ್ಯದ ನಿವಾಸಿಯಾದ ಶ್ರೀಮತಿ ಉಷಾ ಶ್ರೀನಿವಾಸ್ ರವರು ಸಾಯಿ ಬಾಬಾ ದೇವಸ್ಥಾನದ ಬಳಿ ಚರಂಡಿ ಹಾಳಾಗಿದ್ದು, ತುರ್ತಾಗಿ ಚರಂಡಿ ನಿರ್ಮಿಸಲು ಕ್ರಮ ವಹಿಸುವಂತೆ ಕೋರಿದರು.

ಸಹಾಯ ಆಪ್ ನಲ್ಲಿ ದಾಖಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ಆದ್ಯತೆ ಮೇರೆಗೆ ಕ್ರಮ ವಹಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೂ ಸೂಚಿಸುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿಗಳು/ವಾರ್ಡ್ ಸಮಿತಿ | ಸಹಿ/- |
| ವಾರ್ಡ್ ಸಂಖ್ಯೆ-129 | ನೋಡಲ್ ಅಧಿಕಾರಿಗಳು |
| | ವಾರ್ಡ್ ಸಂಖ್ಯೆ-129 |